# ಡಾ. ಶಾಲಿನಿ ರಜನೀಶ್ ಭಾ.ಆ.ಸೇ – ಕಿರು ಪರಿಚಯ

ಡಾ.ಶಾಲಿನಿ ರಜನೀಶ್ ರವರು 1989 ರಲ್ಲಿ ತಮ್ಮ 22 ನೇ ವಯಸ್ಸಿನಲ್ಲಿ ಮಹಿಳಾ ಐ.ಎ.ಎಸ್ ಟಾಪರ್ ಆಗಿ ಭಾರತೀಯ ಆಡಳಿತ ಸೇವೆಗೆ (IAS) ಸೇರಿದರು. ಅವರು ಬಿಎ ಹಾಗೂ ಎಂ.ಎ. ಸೈಕಾಲಜಿಯಲ್ಲಿ ಚಿನ್ನದ ಪದಕ ಪಂಜಾಬ್ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ನಂತರ, ಪಿಎಚ್‌ಡಿ ಅಧ್ಯಯನ ಕೈಗೊಂಡರು. ಮಂಗಳೂರು ವಿಶ್ವವಿದ್ಯಾನಿಲಯದಿಂದ ಗ್ರಾಮೀಣ ಅಭಿವೃದ್ಧಿಯಲ್ಲಿ PhD (2000) ಮತ್ತು ಆಸ್ಟ್ರೇಲಿಯಾದ ಲ್ಯಾತ್ರೋಬ್ ವಿಶ್ವವಿದ್ಯಾಲಯದಿಂದ ಎಂಬಿಎ (2001) ಪದವಿ ಪಡೆದಿದ್ದಾರೆ. ಮಹಿಳಾ ಸಬಲೀಕರಣ, ಸಾರ್ವಜನಿಕ ಆಡಳಿತ ಮತ್ತು ಮಹಿಳಾ ಕಲ್ಯಾಣಕ್ಕಾಗಿ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅವರ ಸಾಧನೆಗಳು ಮತ್ತು ಕೊಡುಗೆಗಳನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು 2013 ರಲ್ಲಿ "ಸಾಹಿತ್ಯ ಡಾಕ್ಟರೇಟ್" ನೀಡಿ ಗೌರವಿಸಿದೆ. ಅವರು ಈವರೆಗೂ 13 ಪುಸ್ತಕಗಳನ್ನು ಬರೆದಿದ್ದು, 8 ಇಂಗ್ಲಿಷ್‌ನಲ್ಲಿ ಮತ್ತು 5 ಕನ್ನಡದಲ್ಲಿ ಇವೆ. ನಿರ್ವಹಣೆ, ವ್ಯಕ್ತಿತ್ವ ವಿಕಸನ, ಮಹಿಳಾ ಸಬಲೀಕರಣ, ಐಎಎಸ್ ತರಬೇತಿ, ಸ್ಮಾರ್ಟ್ ಸಿಟಿ, ಕೋವಿಡ್-19 ಬಗ್ಗೆ ಜನಜಾಗೃತಿ ಮತ್ತು ಅರಿವು, ಯುವಜನತೆಗೆ ಭವಿಷ್ಯವನ್ನು ರೂಪಿಸಿಕೊಳ್ಳುವ ವಿಷಯಗಳನ್ನು ಒಳಗೊಂಡಂತೆ ಅವರು ನಿಯಮಿತವಾಗಿ ಲೇಖನ ಬರೆಯುತ್ತಾರೆ ಮತ್ತು ದೊಡ್ಡ ಮಟ್ಟದಲ್ಲಿ ಸಂಪರ್ಕ ಕಲ್ಪಿಸಲು ದೂರದರ್ಶನ, ರೇಡಿಯೋ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಉಪನ್ಯಾಸ/ಸಂದರ್ಶನಗಳನ್ನು ನೀಡುತ್ತಾರೆ.

ಅವರು ಭಾರತ ಸರ್ಕಾರದಲ್ಲಿ ಹಣಕಾಸು, ನಾಗರಿಕ ವಿಮಾನಯಾನ, ಹಡಗು, ಕೃಷಿ ಮತ್ತು ರಸ್ತೆ ಸಾರಿಗೆ ಸಚಿವಾಲಯಗಳಲ್ಲಿ ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಯಲ್ಲಿ ಅವರು ಕರ್ನಾಟಕದ ನಾಗರೀಕರ ಸೇವೆಗಳ ಖಾತರಿ ಕಾಯಿದೆ, 2011 ರಂತೆ ಜನಪ್ರಿಯವಾಗಿ ಮನೆ ಮಾತಾಗಿರುವ "ಸಕಾಲ" ಮೂಲಕ ನಾಗರೀಕರಿಗೆ 101 ಇಲಾಖೆಯ **1201** ಸೇವೆಗಳನ್ನು ಸಮಯಬದ್ಧವಾಗಿ ನೀಡುವುದನ್ನು ಖಾತ್ರಿಪಡಿಸಿರುತ್ತಾರೆ. ನಿಗದಿತ ಸಮಯದೊಳಗೆ ಸೇವೆ ನೀಡಲು ಸರ್ಕಾರಿ ನೌಕರರು ವಿಫಲವಾದರೆ ನಾಗರೀಕರಿಗೆ ಪಾವತಿಸಬೇಕಾದ ಪರಿಹಾರದ ವೆಚ್ಚವನ್ನು ಅವರ ಸಂಬಳದಿಂದ ಕಡಿತಗೊಳಿಸಲಾಗುತ್ತಿದೆ. ಜೊತೆಗೆ 7ಕ್ಕೂ ಹೆಚ್ಚು ಉದ್ದೇಶಪೂರ್ವಕವಾಗಿ ಕರ್ತವ್ಯಲೋಪ ಎಸಗಿದರೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಇದರಿಂದ, ಕೋಟ್ಯಾಂತರ ನಾಗರೀಕರು ಈ ಸಮಯಬದ್ಧ ಸೇವೆಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. "ಸಕಾಲ" ಅನುಷ್ಠಾನಕ್ಕೆ ಪ್ರಧಾನ ಮಂತ್ರಿ ಪ್ರಶಸ್ತಿ, ಗೂಗಲ್ ಇನ್ನೋವೇಶನ್ ಅವಾರ್ಡ್, ನ್ಯಾಷನಲ್ ಇ-ಗವರ್ನೆನ್ಸ್ ಅವಾರ್ಡ್, "ಸಿಟಿಜನ್ ಸೆಂಟ್ರಿಕ್ ಸರ್ವಿಸ್ ಡೆಲಿವರಿ" ನಲ್ಲಿ 2013-14 ಮತ್ತು ಕ್ವಾಲಿಟಿ ಸರ್ಕಲ್ ಆಫ್ ಇಂಡಿಯಾ ರಾಷ್ಟ್ರೀಯ ಪ್ರಶಸ್ತಿ -2014, ಅಂತರರಾಷ್ಟ್ರೀಯ ಮಟ್ಟಕ್ಕೆ ಕಾಮನ್ವೆಲ್ತ್ ಸಾರ್ವಜನಿಕ ಆಡಳಿತ ಮತ್ತು ನಿರ್ವಹಣೆ (2014 ರಲ್ಲಿ CAPAM) ಪ್ರಶಸ್ತಿಗಳು ದೊರೆತಿವೆ. ದೇಶದಲ್ಲಿ ಮೊದಲ ಬಾರಿಗೆ 2 ತಿಂಗಳೊಳಗೆ ಸಕಾಲ ಸೇವೆಗೆ ISO 9001 ಪ್ರಮಾಣಪತ್ರವನ್ನು ಪಡೆದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ಸಮಗ್ರ ರಾಜ್ಯ ಆರೋಗ್ಯ ನೀತಿ ಮತ್ತು ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ 2007 ರ ತಿದ್ದುಪಡಿಯನ್ನು ಹಾಗೂ ಇ-ಆಸ್ಪತ್ರೆ, ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆ ಇತ್ಯಾದಿಗಳನ್ನು ರೂಪಿಸಲು ಸಕ್ರಿಯ ಪಾತ್ರವನ್ನು ವಹಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ಕಲಿಕೆಯನ್ನು ಹೆಚ್ಚು ಗುಣಾತ್ಮಕ, ಸಂತೋಷದಾಯಕ, ಆಸಕ್ತಿದಾಯಕ ಮತ್ತು ಲಾಭದಾಯಕವಾಗಿಸಲು ಅವರು ಬ್ಯಾಗ್‌ಲೆಸ್(Bagless) ದಿನಗಳನ್ನು ಪರಿಚಯಿಸಿದರು. ಅಲ್ಲದೆ, ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ 42 ಖಾಸಗಿ ಕಂಪನಿಗಳಿಂದ ಸಿಎಸ್‌ಆರ್ ಹಣವನ್ನು ತರುವಲ್ಲಿ ಯಶಸ್ವಿಯಾದರು.

ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿ 5 ವರ್ಷ ಕಾಲ ಯುಎನ್‌ಡಿಪಿಯ ಸಹಯೋಗದೊಂದಿಗೆ 'ಸುಸ್ಥಿರ ಅಭಿವೃದ್ಧಿ ಗುರಿ' ಸಮನ್ವಯ ಕೇಂದ್ರವನ್ನು ಸ್ಥಾಪಿಸಿ ಕರ್ನಾಟಕವನ್ನು ದೇಶದಲ್ಲಿಯೇ 6ನೇ ಸ್ಥಾನದಿಂದ 3ನೇ ಸ್ಥಾನಕ್ಕೆ ತಂದಿದ್ದಾರೆ ಹಾಗೂ ಭಾರತದ ಮೊದಲ ಸಮಗ್ರ CSR ತಂತ್ರಾಂಶ "ಆಕಾಂಕ್ಷಾ" ಅನ್ನು ಅಭಿವೃದ್ಧಿಪಡಿಸಿದ ಸಾಧನೆಗೆ 2022 ನೇ ಸಾಲಿನಲ್ಲಿ ಸಿಎಸ್‌ಆರ್ ಇಂಡಿಯಾ ಪ್ರಶಸ್ತಿಯನ್ನು ಗಳಿಸಿರುತ್ತಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯಾಗಿ "**ಖೇಲೋ ಇಂಡಿಯಾ ವಿಶ್ವವಿದ್ಯಾನಿಲಯ ಕ್ರೀಡೆಗಳು-2022"** ಮತ್ತು "**ರಾಷ್ಟ್ರೀಯ ಯುವ ಉತ್ಸವ**-2023" ದಲ್ಲಿ ರಾಷ್ಟ್ರದ 7000 ಕ್ಕಿಂತ ಹೆಚ್ಚು ಯುವಜನರ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ.

ಸಿ.ಆ.ಸು.ಇ.(ಇ-ಆಡಳಿತ) ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ನಿರ್ವಹಿಸಿ ವಿವಿಧ ಇಲಾಖೆಗಳ ತಂತ್ರಾಂಶಗಳನ್ನು ಒಗ್ಗೂಡಿಸುವ ಮೂಲಕ ನಾಗರಿಕ ಸೇವೆಗಳನ್ನು ಸುಧಾರಿಸಿರುತ್ತಾರೆ.

ದಿನಾಂಕ: 01.09.2023 ರಿಂದ ಪ್ರಸ್ತುತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಇತ್ಯಾದಿ ಸಂಪನ್ನ ಮೂಲಗಳ ಅಭಿವೃಧ್ಧಿಗೊಳಿಸಿ ರಾಜ್ಯದ ಆಂತರಿಕ ಉತ್ಪನ್ನಗಳ ವರ್ಧನೆಗೆ ಕ್ರಿಯಾಬದ್ಧರಾಗಿರುತ್ತಾರೆ.

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.shaliniias.org ಗೆ ಭೇಟಿ ನೀಡಿ.